ನಿನ್ನ ನಂತರೂ ಉಳಕೊಳ್ಳಲಿಲ್ಲ. ನನ್ನ ಮಾತು ಕೇಳಲಿಲ್ಲ. ಈಗ ನನ್ನ ಮನೇನೇ ಸಂಸಾರನೇ ನಾಶ ಆಗೋಕೆ ಬಂದಿದೆ. ನಿಮ್ಮನ್ನ ಬಲಿಕೊಟ್ಟು ನಾನು ಬದುಕಿ ಕ್ರೂರ ಬಾಳು ಬಾಳಲಾರೆ.

ಸಹಧರ್ಮಚಾರೀ ನೀನು ನನ್ನ ಧರ್ಮಕೆ ಚೆನ್ನಾಗಿ ನಿಂತೆ. ನನ್ನ ತಾಯಿಗೆ ಸಮವಾಗಿ ನೀನು ಕಷ್ಟಾನೆಲ್ಲ ಸಹಿಸಿಕೊಂಡೆ. ಈಗ ನನ್ನನ್ನೇ ಕೊಟ್ಟುಕೊಂಡರೂ ಪರಲೋಕದಲ್ಲಿ, 'ಇವರನ್ನ ಬಿಟ್ಟು ಬಂದೆನಲ್ಲಾ – ಇವರು ಬದುಕುತ್ತಾರಾ' ಅಂತ ಕುದೀತಿರತೇನೆ. ಬೇರೆಯವರನ್ನ ಕಳಿಸಿದರೆ ತಿಳಿದವರು ಬೈಯುತ್ತಾರೆ. ನಾನೇ ಬಲಿಯಾದರೆ ನೀವು ಉಳಿಯಲ್ಲ. ಎಂಥ ಕಷ್ಟಕ್ಕೆ ಬಂತು. ತಪ್ಪಿಸಿಕೊಳ್ಳೋದು ಹೇಗಪ್ಪಾ. ಅಯ್ಯೋ, ತ್ಥೂ... ಈ ಬಾಳಿಗಿಷ್ಟು.

**ಹೆಂಡತಿ:** ಎಲ್ಲ ತಿಳಿದವನು, ನಾಡಾಡೀ ಥರ ನೀನೇ ಕೊರಗಿದರೆ ಹೇಗೆ? ಹೀಗೆ ಕೊರಗತಾ ಕೂರೋಕೆ ಇದು ಸಮಯಾನಾ ಹೇಳು.

ಪ್ರಾಣಾನಾದರೂ ಕೊಟ್ಟು ಗಂಡನಿಗೆ ಒಳ್ಳೇದು ಮಾಡಬೇಕು. ಹೆಂಗಸರಿಗೆ ಇದೇ ಉತ್ತಮ ದಾರಿ ಅಂತ ಲೋಕದಲ್ಲಿ ಹಿಂದಿನಿಂದಲೂ ನಡಕೊಂಡು ಬಂದಿದೆ.

ನಾನು ಹಾಗೆ ಮಾಡೋದರಿಂದ ನೀನೂ ಇಲ್ಲಿ ಸುಖವಾಗಿರಬಹುದು. ನನಗೂ ಇಲ್ಲಿ ಹೆಸರು ಬರತ್ತೆ. ಅಲ್ಲಿ ಅಕ್ಷಯ ಲೋಕಾನೂ ಸಿಗತ್ತೆ.

ನೀನಿಲ್ಲದೆ ಈ ಎರಡು ಎಳೆ ಮಕ್ಕಳನ್ನ ಕಟ್ಟಿಕೊಂಡು–ನೀನಿಲ್ಲದೆ. ವಿಧವೆ ಆದೋಳು ಒಳ್ಳೇ ದಾರೀಲೇ ಗಟ್ಟಿಯಾಗಿ ಇರಬಲ್ಲೆನಾ? ನನ್ನಿಂದ ನಿನ್ನನ್ನು ದಡಹತ್ತಿಸಿಕೋ. ನನ್ನ ಮಕ್ಕಳನ್ನು ಸಾಕಿಕೊಂಡು ನೀನು ಇದ್ದುಬಿಡು.

ಕೊಬ್ಬಿನವರು, ಸಂಬಂಧಾನೇ ಇಲ್ಲದವರು, ಯೋಗ್ಯ ಅಲ್ಲದವರು, ನಂಟಸ್ತಿಕೇಗೆ ಅಂತ ಈ ಹುಡುಗೀನ ಕೇಳಿಕೊಂಡು ಬಂದರೆ ನನ್ನ ಕೈಲಿ ಕಾಪಾಡಕ್ಕೆ ಆಗತ್ತಾ?

ನೆಲದಲ್ಲಿ ಬಿದ್ದ ಮಾಂಸಾನ ಹಕ್ಕಿಗಳು ಹರಿದು ತಿನ್ನೋ ಹಾಗೆ, ಗಂಡ ಇಲ್ಲದ ಹೆಣ್ಣಿನ್ನ ಊರ ಜನ ಎಲ್ಲಾ ಹರಿದು ಮುಕ್ಕುತ್ತಾರೆ.

ಹೆಣ್ಣನ್ನು ಕೊಲ್ಲಬಾರದು ಅಂತ ಧರ್ಮ ತಿಳಿದವರು ತೀರ್ಮಾನ ಮಾಡಿದಾರೆ. ರಾಕ್ಷಸರಿಗೂ ಧರ್ಮ ಗೊತ್ತಿದೆ. ಅವನು ನನ್ನ ಕೊಲ್ಲದೇನೂ ಇರಬಹುದು.

ಕೊಂದರೇನಂತೆ ಬೇಕಾದ್ದೆಲ್ಲ ಉಂಡು ಅನುಭವಿಸಿದೇನೆ. ಮಾಡಬೇಕಾದ್ದೆಲ್ಲ ಮಾಡಿ ತೀರಿಸಿದೇನೆ. ಒಳ್ಳೇ ಮಕ್ಕಳನ್ನ ಹೆತ್ತು ಕೊಟ್ಟಿದೇನೆ. ನೋಡು, ಮಕ್ಕಳ ಹೆತ್ತು ಮುದುಕಿ ಆಗಿಬಿಟ್ಟಿದೀನಿ. ಇನ್ನು ಈ ಜೀವ ಹೋದರೆ ನನಗೇನೂ ದುಃಖ ಇಲ್ಲ.

ಇಲ್ಲೀವರೆಗೆ ನಿನ್ನ ಆಸೆ ತೀರಿಸಿದೀನಿ. ಇದೆಲ್ಲಾ ನೋಡಿದಾಗ ನಾನು ಹೋಗೋದೇ ಸರಿ. ನನ್ನ ತೊರೆದರೂ ನೀನು ಇನ್ನೊಬ್ಬಳನ್ನ ಪಡಕೋಬಹುದು. ನಿನ್ನ ಧರ್ಮ ಮತ್ತೆ ಶುರುವಾಗತ್ತೆ.

–ಎಂದು ಹೇಳುತ್ತಾ ಗಂಡನನ್ನ ತಬ್ಬಿಕೊಂಡು ಕಣ್ಣೀರು ಸುರಿಸೋದನ್ನ ಕಂಡು ಅವನೂ ದುಃಖಪಡತಿದ್ದ. ಅವರಿಬ್ಬರ ಮಿತಿಯಿಲ್ಲದ ದುಃಖ ಕೇಳತಾ ಆ ಬಾಲೆಗೂ ದುಃಖ ತುಂಬಿಕೊಂಡಿತು.

**ಮಗಳು:** 'ದಿಕ್ಕಿಲ್ಲದವರ ಥರ ಗೋಳಾಡತೀರಿ ಯಾಕೆ. ನನ್ನ ಮಾತೂ ಸ್ವಲ್ಪ ಕೇಳಿಸಿಕೊಳ್ಳಿ. ವಯಸಿಗೆ ಬಂದಮೇಲೆ ನನ್ನನ್ನ ತೊರೀಲೇಬೇಕು ತಾನೇ. ಈಗಲೇ ತೊರೆದುಬಿಡಿ. ನನ್ನೊಬ್ಬಳನ್ನು ತೊರೆದು ಎಲ್ಲಾರೂ ಉಳಕೊಳ್ಳಿ. ನಾನು ನಿಮ್ಮನ್ನ ದಾಟಿಸತೇನೆ. ನನ್ನ ದೋಣಿ ಮಾಡಿಕೊಂಡು ಹೊಳೆ ದಾಟಿ.

ಮಗ ಅಂದರೆ ಇನ್ನೊಂದು ತಾನೇ. ಹೆಂಡತಿ ಅಂದರೆ ತನ್ನ ಸಖಿ. ಮಗಳು ಅಂದರೆ ಬರೀ ಹೊರೆ ಅಲ್ಲವಾ? ಆ ಹೊರೆ ಕಳಕೋ, ಧರ್ಮದಲ್ಲಿ ಉಳಕೋ.

ನೀನಿಲ್ಲದೆ, ಬೇರೆಯವರನ್ನ ಅನ್ನಕ್ಕಾಗಿ ಬೇಡತಾ, ನಾಯಿ ಥರಾ ಬದುಕೋದಕ್ಕಿಂತ ಕಷ್ಟ ಏನಿದೆ ಹೇಳು. ನೀವು ಸಂತೋಷವಾಗಿ ಆರೋಗ್ಯವಾಗಿ ನಂಟರ ಜೊತೆ ಇರೋದನ್ನ, ಆ ಲೋಕದಲ್ಲಿ ನೋಡಿಕೊಂಡು ನಾನು ಸುಖವಾಗಿರತೇನೆ'.

ಮಗಳು ಹೀಗೆ ನಾನಾ ಬಗೆಯಾಗಿ ದುಃಖ ಮಾಡಿದ್ದನ್ನ ಕೇಳಿ ತಂದೆ ತಾಯಿಯೂ ಅಳುವುದಕ್ಕೆ ಶುರುಮಾಡಿದರು. ಹೀಗೆ ಜೋರಾಗಿ ಅವರು ಅಳುತ್ತಾ ಇರುವುದನ್ನು ನೋಡಿ ಅವರ ಪುಟಾಣಿ ಮಗು ಕಣ್ಣರಳಿಸಿಕೊಂಡು ಒಬ್ಬೊಬ್ಬರ ಹತ್ತಿರಾನೂ ಬಂದು ಮುದ್ದು ಮುದ್ದಾಗಿ – 'ಅಪ್ಪಾ ಅಳಬೇಡ', 'ಅಮ್ಮಾ ಅಳಬೇಡ', 'ಅಕ್ಕಾ ಬೇಡ' ಅನ್ನುತ್ತ ಕೇಕೆ ಹಾಕತಾ ನೆಲದಲ್ಲಿ ಬಿದ್ದಿದ್ದ ಹುಲ್ಲು ಕಡ್ಡಿ ತಗೊಂಡು 'ಈ ಕಡ್ಡೀಲಿ ಮನುಷ್ಯರನ್ನ ತಿನ್ನೋ ಆ ರಾಕ್ಷಸನ್ನ ಕೊಂದುಬಿಡತೀನಿ' ಎಂದಿತು. ದುಃಖದಲ್ಲಿ ಮುಳುಗಿ ಹೋಗಿದ್ದರೂ ಆ ಮಾತು ಕೇಳಿ ಗೊತ್ತಿಲ್ಲದಂತೆ ಅವರಿಗೆ ನಗುವೂ ಬಂತು.

ಇದೇ ಸರಿಯಾದ ಸಮಯ ಅಂತ ತಿಳಿದು ಕುಂತಿ ಒಳಕ್ಕೆ ಬಂದಳು, ಸತ್ತವರ ಹತ್ತಿರ ಅಮೃತ ಬಂದ ಹಾಗೆ.

# ವನಪರ್ವದೊಳಗೊಂದು ಪೂರ್ವಕಥಾ ಋಷ್ಯಶೃಂಗ

**ಹಿನ್ನೆಲೆ:** ಋಷ್ಯಶೃಂಗ ಅವರಪ್ಪನ ಮುಖ ಬಿಟ್ಟು ಬೇರೆ ಯಾವ ಮನುಷ್ಯನನ್ನೂ ನೋಡೇ ಇರಲಿಲ್ಲ. ಅವರಪ್ಪನ ಧಾತು ಹೊಳೆಗೆ ಬಿದ್ದು, ಅದನ್ನ ಒಂದು ಜಿಂಕೆ ಅಕಸ್ಮಾತ್ ಕುಡಿದು ಬಸಿರಾದ್ದರಿಂದ ಜಿಂಕೆಯ ಬಸುರಲ್ಲಿ ಹುಟ್ಟಿದವನು ಇವನು – ಹಾಗೂ ಮನುಷ್ಯ ತಾಯಿಯೂ ಇಲ್ಲ.

ಅವನು ಅಯೋಧ್ಯೆಗೆ ಬಂದರೆ, ಮಳೆ ಬಂದು ಹದಿನೈದು ವರ್ಷದ ಬರಗಾಲ ತೀರುತ್ತದೆ ಎಂದು ಹೇಳಿದ್ದಕ್ಕೆ ಅಲ್ಲಿನ ರಾಜ ನಾಯಕಸಾನಿಯರಿಗೆ ಹೋಗಿ ಕರೆತರಲು ಹೇಳಿದ. ಋಷಿಯ ಶಾಪದ ಭಯಕ್ಕೆ ಯಾರೂ ಮುಂದೆ ಬರಲಿಲ್ಲ. ಒಬ್ಬಳು ಕಸುಬುದಾರ ಮುದಿ ನಾಯಕಸಾನಿ ಮಾತ್ರ ತಾನು ಕರೆದುಕೊಂಡು ಬರುತ್ತೇನೆಂದು ಒಪ್ಪಿಕೊಳ್ಳುತ್ತಾಳೆ.

* * *

ಆ ನಾಯಕಸಾನಿ ಸ್ವಂತ ಬುದ್ಧಿ ಬಳಸಿ ಒಂದು ತೇಲುವ ಆಶ್ರಮ (ವಾಪ್ಯಾಶ್ರಮ) ತಯಾರು ಮಾಡಿದಳು. ಅದರೊಳಗೆ ಒಮ್ಮೆ ತಿಂದರೆ ತಿನ್ನತಾನೇ ಇರಬೇಕು ಎನಿಸುವಂಥ, ಆ ರುಚಿಯನ್ನೇ ಬಯಸುತಾ ಇರೋಹಾಗೆ ಮಾಡುವ ಹಣ್ಣು ಬಿಡುವ ಥರಾವರಿ ಹಣ್ಣಿನ ಮರಗಳು, ಬಳ್ಳಿಗಳು, ಪೊದೆಗಳು. ತೀರಾ ಚೆಲುವಾದ ಆಶ್ರಮ ಅದು. ಮನಸ್ಸನ್ನು ಪೂರಾ ಸೆಳೆದುಕೊಂಡುಬಿಡುತ್ತಿತ್ತು. ಅಂಥದನ್ನು ಅಲ್ಲಿಯವರೆಗೆ ಯಾರೂ ಕಂಡೇ ಇರಲಿಲ್ಲ.

ಆ ದೋಣಿಯನ್ನು ಆಶ್ರಮಕ್ಕೆ ದೂರವಲ್ಲದ ಕಡೆ ನಿಲ್ಲಿಸಿಕೊಂಡು ಒಂದಿಬ್ಬರು ಆಳುಗಳನ್ನು ಆ ಋಷಿಯ ಆಶ್ರಮದ ಕಡೆ ಓಡಾಡಲು ಬಿಟ್ಟಳು. ಕಶ್ಯಪ ಇಲ್ಲದ ಹೊತ್ತನ್ನು ತಿಳಿದುಕೊಂಡು ಆ ನಾಯಕಸಾನಿ ತನ್ನ ಚೆಲುವಿ ಮಗಳನ್ನು ಅಲ್ಲಿಗೆ ಕಳುಹಿಸಿದಳು. ಆ ಜಾಣೆ ತೀರಾ ಚಾಲೂಕಿನಲ್ಲಿ ಋಷಿಯ ಮಗನ ಹತ್ತಿರ ಬಂದಳು.

**ಚೆಲುವಿ:** ನಿನ್ನನ್ನು ನೋಡಕ್ಕೆ ಅಂತಲೇ ಬಂದೆ. ಎಲ್ಲಾ ಚೆನ್ನಾಗಿದೀರಾ? ಆಶ್ರಮ ನಿನಗೆ ಹಿಡಿಸತ್ತಾ? ಹಣ್ಣು, ಗೆಣಸು ಸಾಕಷ್ಟು ಸಿಗತಾ ಇದೆ ತಾನೇ?

ತಾಪಸಿಗಳು ಹೇಗಿದಾರೆ, ಅವರ ತಪಸ್ಸು ಬೆಳೀತಾ ಹೆಚ್ಚತಾ ಇದೆಯಾ, ನಿಮ್ಮ ತಂದೆಯವರ ತೇಜಸ್ಸು ಕಡಮೆ ಆಗತಾ ಇಲ್ಲ ತಾನೆ, ನಿನ್ನ ಜತೆ ಪ್ರೀತಿಯಾಗಿದಾರೆ ಅಲ್ಲವಾ, ನಿನ್ನ ಓದೆಲ್ಲಾ ಮುಗೀತಾ ಋಷ್ಯಶೃಂಗ?

**ಋಷ್ಯಶೃಂಗ:** ಸ್ವಾಮೀ, ದೀಪದ ಥರ ಬೆಳಗತಾ ಇದೀರಿ. ನಿಮ್ಮನ್ನ ನೋಡಿದರೆ ನಮಸ್ಕಾರ ಮಾಡಬೇಕು ಅನ್ನಿಸತಾ ಇದೆ. ಕಾಲು ತೊಳೆಯೋಕೆ ನೀರು ತರೋಣ ಅನಿಸ್ತಾ ಇದೆ. ಹಣ್ಣು ಗೆಣಸು ತರತೀನಿ ತಾಳಿ. ಅದು ನಮ್ಮ ಪದ್ಧತಿ.

ಇದು ದರ್ಭೆಲಿ ಮಾಡಿದ ಆಸನ. ಜಿಂಕೆ ಚರ್ಮದ ಅಂಚು ಕಟ್ಟಿದೆ ಇದಕ್ಕೆ, ಸುಖವಾಗಿರತ್ತೆ ಕೂತುಕೊಳ್ಳಿ. ತಮ್ಮದು ಯಾವ ಆಶ್ರಮ? ನಿಮ್ಮ ಹೆಸರೇನು? ವಿಪ್ರೋತ್ತಮ ವ್ರತದಲ್ಲಿದ್ದರೂ ನೀವು ದೇವತೆ ಹಾಗೆ ಕಾಣತೀರಿ.

**ಚೆಲುವಿ:** ಕಶ್ಯಪ ಪುತ್ರ, ಇಲ್ಲಿಂದ ಮೂರು ಯೋಜನದಾಚೆ ಒಂದು ಬೆಟ್ಟ ಇದೆಯಲ್ಲ, ಅದರಾಚೆಗೆ ಇದೆ ನನ್ನ ಆಶ್ರಮ. ತುಂಬಾ ಚಂದದ ಆಶ್ರಮ ಅದು.

ನಮ್ಮ ಪದ್ಧತಿ ಪ್ರಕಾರ ನಾವು ನಿನ್ನನ್ನು ಅಪ್ಪಿಕೋಬೇಕು, ನಮಸ್ಕಾರ ಮಾಡಿಸಿಕೋಬಾರದು. ಕಾಲಿಗೆ ನೀರು ಹಾಕಿಸಿಕೊಳ್ಳಕೂಡದು.

**ಋಷ್ಯಶೃಂಗ:** ಹೋಗಲಿ, ಈ ನೆಲ್ಲಿಕಾಯಿ ತಿನ್ನಿ. ಇದು ಭಲ್ಲಾತಕೀ, ಚೆನ್ನಾಗಿ ಮಾಗಿದೆ. ಈ ಇಂಗುದ, ಹಿಪ್ಪಲಿ, ಪ್ರಿಯಾಲ ಚೆನ್ನಾಗಿರತ್ತೆ ತಿನ್ನಿ.